ಓ.ಎಸ್. ನಂ. 126/2017

ಪಿ ಡಬ್ಲ್ಯೂ: 1

**ದಿಃ 16.01.2021 ರಂದು ಸಾಕ್ಷಿದಾರರು ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಸಿ.ಬಿ. ವಕೀಲರಿಂದಃ**

1. ನಾನು ನ್ಯಾಯಾಲಯದ ಆದೇಶದ ಪ್ರಕಾರ ದಿಃ 14.09.2010 ರ ಖರೀದಿ ಕರಾರು ಪತ್ರದ ಮೇಲೆ ರಾಜಸ್ವವನ್ನು ಬರಿಸಿರುತ್ತೇನೆ. ಸದರಿ ಖರೀದಿ ಖರಾರು ಪತ್ರವನ್ನು ನಿಪಿ-01 ಎಂದು ಗುರುತಿಸಲಾಯಿತು. ದಿಃ 13.02.2017 ರ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-02 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-03 ಎಂದು ಗುರುತಿಸಲಾಯಿತು. ದಿಃ 18.02.2017 ರಂದು ಪ್ರತಿವಾದಿ ನೀಡಿದ ಪ್ರತ್ಯುತ್ತರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-04 ಎಂದು ಗುರುತಿಸಲಾಯಿತು. ದಿಃ 06.01.2009 ರ ಬೋಗ್ಯದ ಕರಾರು ಪತ್ರವನ್ನು ಹಾಜರುಪಡಿಸಿರುತ್ತೇನೆ. " ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸದರಿ ದಾಖಲೆಯು ನೊಂದಾಯಿತವಲ್ಲದ ಕಾರಣ ಅದನ್ನು ನಿಶಾನೆಗೊಳಿಸಲು ಬರುವುದಿಲ್ಲ ಎಂದು ವಾದಿಸಿರುತ್ತಾರೆ. ಅದಕ್ಕೆ ವಾದಿ ಪರ ವಕೀಲರು ಸದರಿ ದಾಖಲೆಯನ್ನು ಹೆಚ್ಚುವರಿ ಉದ್ದೇಶಕ್ಕಾಗಿ ನಿಶಾನೆಗೊಳಿಸಬಹುದೆಂದು ವಾದಿಸುತ್ತಾರೆ ". ಆದ್ದರಿಂದ ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಹೆಚ್ಚುವರಿ ಉದ್ದೇಶಕ್ಕಾಗಿ ಅದನ್ನು ನಿಪಿ-05 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಕಾಲಾವಕಾಶ ನೀಡಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

*(ತೆ.ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೊಸದುರ್ಗ .